**ಹೊಸ ಶಿಕ್ಷಣ ಪದ್ಧತಿ ಕುರಿತು**

38 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಈಗ ಹಾಲಿ ಜಾರಿಯಲ್ಲಿ ಇರುವ ಶಿಕ್ಷಣ ಪದ್ಧತಿಯನ್ನು ಬದಲಿಸಿ, ಹೊಸ ರೀತಿಯ ಬದಲಾವಣೆಯ ರೂಪ ಕೊಡುವ ಯೋಜನೆ ಸರ್ಕಾರಕ್ಕಿದೆಯೇ?

ಆ) ಹಾಗಿದ್ದಲ್ಲಿ ಆ ಹೊಸರೂಪದ ಶಿಕ್ಷಣದ ಪದ್ಧತಿಯ ರೂಪರೇಷೆಯ ವ್ಯವಸ್ಥೆಗಳೇನು?

ಶ್ರೀಮತಿ. ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಶ್ರೀ ಬಿ.ಎಂ. ಇದಿನಬ್ಬ: ಮಾನ್ಯ ಅಧ್ಯಕ್ಷರೇ, ನಾನು ಕೇಳಿದ ಪ್ರಶ್ನೆಗೆ ಇದರಲ್ಲಿ "ಇಲ್ಲ" ಮತ್ತು "ಉದ್ಭವಿಸುವುದಿಲ್ಲ" ಎಂದು ಹೇಳಿ ಜಾರಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಈಗ ಹಾಲಿ ಜಾರಿಯಲ್ಲಿರುವ ಶಿಕ್ಷಣ ಪದ್ಧತಿಯನ್ನು ಬದಲಿಸಿ, ಹೊಸ ರೀತಿಯ ಬದಲಾವಣೆಯ ರೂಪಕೊಡುವ ಯೋಚನೆ ಸರ್ಕಾರಕ್ಕೆ ಇದೆಯೇ ಎಂದು ಕೇಳಿದಾಗ "ಇಲ್ಲ" ಎಂದು ಹೇಳಿದ್ದಾರೆ. ಹಾಗಿದ್ದಲ್ಲಿ, ಆ ಹೊಸ ರೂಪದ ಶಿಕ್ಷಣದ ಪದ್ಧತಿಯ ರೂಪರೇಷೆ ವ್ಯವಸ್ಥೆಗಳು ಏನು ಎಂದು ಕೇಳಿದ್ದಕ್ಕೆ "ಉದ್ಭವಿಸುವುದಿಲ್ಲ" ಎಂದು ತಿಳಿಸಿದ್ದಾರೆ. ಈ ಹಿಂದೆ ಸದನದಲ್ಲಿ ಹಿಂದಿನ ಶಿಕ್ಷಣ ಮಂತ್ರಿಗಳು ಏನು ಹೇಳಿದ್ದಾರೆಂದರೆ ಈಗ ಇರುವ ಶಿಕ್ಷಣ ಪದ್ಧತಿ ಸರಿಯಿಲ್ಲ, ಅದಕ್ಕೆ ಒಳ್ಳೆಯ ಶಿಕ್ಷಣ ಪದ್ಧತಿ ಕೊಡಬೇಕು, ದೇಶಪ್ರೇಮ ಹುಟ್ಟುವಂತಹದು, ಇಡೀ ದೇಶದಲ್ಲಿ ಶಕ್ತಿ ಬರುವಂತಹದು, ಮಕ್ಕಳಿಗೆ ಒಳ್ಳೆಯ ಅಭಿಪ್ರಾಯ ಬರತಕ್ಕ ರೀತಿಯಲ್ಲಿ ಆಳವಡಿಸಬೇಕು ಎಂದು ಹೇಳುತ್ತಾ ಹೇಳುತ್ತಾ ಅದು ಮಾತ್ರ ಅಲ್ಲ, ಇವತ್ತು ಮಕ್ಕಳ ಬೆನ್ನು ಮೇಲೆ ಹತ್ತು ಮಣದ ಭಾರದ ಚೀಲಗಳನ್ನು ಇಟ್ಟು ನಡೆಯಿಸಿಕೊಂಡು ಹೋಗಿ ಮಕ್ಕಳ ಬೆನ್ನೆಲ್ಲಾ ಗೂನಾಗಿದೆ. ಇದೆಲ್ಲಾ ತಪ್ಪಿಸತಕ್ಕಂಥ ಹೊಸ ರೀತಿಯ, ಸೌಹಾರ್ದವನ್ನು ಮೂಡಿಸುವ, ಪ್ರೇಮವನ್ನು ಮೂಡಿಸುವ, ದೇಶಪ್ರೇಮವನ್ನು ಮೂಡಿಸುವ ಈ ದೇಶದ ಶಕ್ತಿಯನ್ನು ಹೆಚ್ಚಿಸುವ ಪದ್ಧತಿಯನ್ನು ಮಾಡುತ್ತೇವೆಂದು ಹೇಳುತ್ತಾ ಬಂದು ಇವತ್ತು "ಇಲ್ಲ" ಎಂದು ಹೇಳಿರತಕ್ಕದ್ದು ನನಗೆ ಬಹಳ ಆಶ್ಚರ್ಯ ಆಗಿದೆ. ಇದಕ್ಕೆ ಸರಿಯಾದ ಉತ್ತರವನ್ನು ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ. ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಮಾನ್ಯ ಅಧ್ಯಕ್ಷರೇ, ಈಗ ಶಿಕ್ಷಣ ನೀತಿಯನ್ನು ನಾವು ರೂಪಿಸಬೇಕಾದರೆ ರಾಷ್ಟ್ರದ ಸಂವಿಧಾನದಲ್ಲಿ ತಳೆದಿರುವ ನೀತಿಗಳನ್ನು ನಾವು ಅನುಸರಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರದಲ್ಲಿ ಸೃಷ್ಟಿಸಿರುವಂತಹ ಶಿಕ್ಷಣದ ನೀತಿಗಳಲ್ಲಿ ಕಾಲಕಾಲಕ್ಕೆ ಸ್ವಲ್ಪ ಬದಲಾವಣೆಗಳನ್ನು ತರಬೇಕಾಗುತ್ತದೆ. ಅದರಂತೆ ತರುತ್ತಿದ್ದೇವೆ. ಇದನ್ನು ನಾನು ಹೇಳಬೇಕಾದರೆ, ಇದರಲ್ಲಿ ಮುಖ್ಯವಾದ ಅಂಶಗಳು ಎಂದರೆ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ, ಉನ್ನತ ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣವನ್ನು ಬಲಪಡಿಸುವುದು ಈ ರೀತಿಯಾಗಿ ಕೆಲವಾರು ಕಾರ್ಯಕ್ರಮಗಳನ್ನು ನಾವು ಈಗಾಗಲೇ ಹಮ್ಮಿಕೊಂಡು ಮುಂದುವರಿದ ರಾಷ್ಟ್ರಗಳ ಜೊತೆ ನಾವು ಸಹ ಸಮಾನವಾಗಿ ನಿಲ್ಲುತಕ್ಕ ಒಂದು ಕಾರ್ಯಕ್ರಮವನ್ನು ಈಗ ನಡೆಸಿಕೊಂಡು ಬಂದಿದ್ದೇವೆ. ಶಿಕ್ಷಣ ಎನ್ನುವುದು ಕೇಂದ್ರ ಮತ್ತು ರಾಜ್ಯದ ಸಂಯುಕ್ತ ಪಟ್ಟಿಯಲ್ಲಿರತಕ್ಕ ವಿಷಯ.

ಅಂದರೆ ಕನ್ಸರೆಂಟ್ ಲಿಸ್ಟ್‌ನಲ್ಲಿರತಕ್ಕ ವಿಷಯ. ನಮ್ಮ ಹೊಸ ಎಜುಕೇಷನ್ ಪಾಲಿಸಿ 1986ರಲ್ಲಿ ಏನು ಜಾರಿಗೆ ಬಂದಿದೆ, ಅದರಲ್ಲಿ ಶಿಕ್ಷಣದ ಪದ್ಧತಿಗೆ ಒಂದು ಹೊಸ ರೂಪವನ್ನು ನಾವು ಕೊಟ್ಟಾಗಿದೆ. ತಾವು ಏನು ಹೇಳುತ್ತಿದ್ದೀರಿ, ದೇಶಪ್ರೇಮ, ಈ ಹೊರೆಯನ್ನು ಕಡಿಮೆ ಮಾಡತಕ್ಕದ್ದು ಇವೆಲ್ಲವೂ ಅದರಲ್ಲಿ ಅಡಕವಾಗಿದೆಯೆಂದರೆ ತಪ್ಪಾಗಲಿಕ್ಕಿಲ್ಲ. ಈ ಹೊರೆ ಬಗ್ಗೆ ತಾವು ಹೇಳಿದ್ದೀರಿ. ಮಕ್ಕಳಿಗೆ ಬೆನ್ನು ಬಾಗುವ ಹಾಗೆ ಪುಸ್ತಕಗಳನ್ನು ನಿಗದಿ ಮಾಡಿದ್ದೀರಿ ಎಂದು ತಾವು ಏನು ಹೇಳಿದ್ದೀರಿ, ಇದು ನಿಜವಾಗಿ ನಮ್ಮ ಸರ್ಕಾರಿ ಶಾಲೆಗಳಲ್ಲಿ ಈ ರೀತಿಯ ಒಂದು ಪದ್ಧತಿ ಇಲ್ಲ. ಒಂದನೇ ತರಗತಿಗೆ ಒಂದೇ ಪಠ್ಯ ಪುಸ್ತಕ ಇದೆ, ಎರಡನೇ ತರಗತಿಗೆ ಎರಡು ಪುಸ್ತಕ, ಮೂರನೇ ತರಗತಿಗೆ ನಾಲ್ಕು ಪುಸ್ತಕಗಳು ಇರುವುದು. ಹೀಗೆ ಗವರ್ನಮೆಂಟ್ ಹಾಕಿರತಕ್ಕ ನೀತಿಗೆ ಅನುಸಾರವಾಗಿ ಹೆಚ್ಚಿಗೆ ಹೊರೆ ಇಲ್ಲ. ನಾವು ಹೊರೆ ನೋಡತಕ್ಕದ್ದು ಪ್ರೈವೇಟ್ ಇನ್ಸ್ಟಿಟ್ಯೂಷನ್ಸ್‌ನಲ್ಲಿ. ಅವರು ಸಾಕಷ್ಟು ಪುಸ್ತಕಗಳನ್ನು ಏನೋ ಒದಗಿಸಿ ಮಕ್ಕಳಿಗೆ ಹೆಚ್ಚು ವಿಷಯಗಳನ್ನು ಕಲಿಸಬೇಕು ಎಂಬ ದೃಷ್ಟಿಯಿಂದ ಹೆಚ್ಚು ಹೊರೆ ಹೊರಿಸುತ್ತಿದ್ದಾರೆ. ಅವರನ್ನು ನಾವು ವಿಚಾರಿಸಿದಾಗ, ತಂದೆ ತಾಯಿಗಳಿಂದಲೇ ತಮ್ಮ ಮಕ್ಕಳಿಗೆ ಹೆಚ್ಚು ವಿಷಯಗಳನ್ನು ತಿಳಿಸಬೇಕು ಎಂದು ಒತ್ತಾಯ ಬರುತ್ತಿದೆ ಎನ್ನುವ ವಿಷಯ ಗೊತ್ತಾಯಿತು. ಇದು ನಮಗೆ ಮುಖ್ಯವಾಗಿದೆ. ಆದ್ದರಿಂದ ನ್ಯೂ ಎಜುಕೇಶನ್ ಪಾಲಿಸಿ ವಿಚಾರದಲ್ಲಿ ತಾವು ಕೊಟ್ಟಿರುವ ಎಲ್ಲಾ ಸಲಹೆಗಳನ್ನು ಅಳವಡಿಸಲಾಗಿದೆ ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಂ.ಎಸ್. ಪಾಟೀಲ್ : ಬಹಳ ಪ್ರಾಮುಖ್ಯವಾದ ವಿಷಯ ಹೇಳುತ್ತೇನೆ. ದೇಶದ ಶಿಕ್ಷಣಕ್ಕೆ ಸಂಬಂಧಪಟ್ಟಿದ್ದು. ಇದು ಅಷ್ಟು ಹಗುರವಾಗಿ ತೆಗೆದುಕೊಳ್ಳತಕ್ಕ ವಿಚಾರ ಅಲ್ಲ.

ಅಧ್ಯಕ್ಷರು : ಹಗುರವಾಗಿ ತೆಗೆದುಕೊಳ್ಳತಕ್ಕ ಪ್ರಶ್ನೆ ಅಲ್ಲ. ಇದು ಪಾಲಿಸಿ ಮ್ಯಾಟರ್ ಮೇಲೆ ಇದೆ. ಚರ್ಚೆಗೆ ಸಾಕಷ್ಟು ಅವಕಾಶ ಇದೆ. ಚರ್ಚೆಯ ಸಮಯದಲ್ಲಿ ಚರ್ಚೆ ಮಾಡಿ. ಸರ್ಕಾರ ಇದಕ್ಕೆ ಏನು ನಿರ್ಣಯ ತೆಗೆದುಕೊಳ್ಳಬೇಕೋ ಆ ರೀತಿ ತೆಗೆದುಕೊಳ್ಳುವುದಕ್ಕೆ ದಾರಿ ಇದೆ.

ಶ್ರೀ ಎಂ.ಎಸ್. ಪಾಟೀಲ್ : ಇದರಲ್ಲಿ ಸರ್ಕಾರದ ಜವಾಬ್ದಾರಿ ಸಹ ಇದೆ.

ಅಧ್ಯಕ್ಷರು : ಆ ನಂತರ ನೀವು ಹೇಳಿ.

ಶ್ರೀ ಬಿ.ಎಂ. ಇದಿನಬ್ಬ : ಈಗ ಮಾನ್ಯ ಸಚಿವರು ನಮ್ಮ ಸರ್ಕಾರಿ ಶಾಲೆಗಳಲ್ಲಿ ಒಂದನೇ ತರಗತಿಗೆ ಒಂದತು ಪುಸ್ತಕ, ಎರಡನೇ ತರಗತಿಗೆ ಎರಡು ಪುಸ್ತಕ ಇರುವುದು ಪ್ರೈವೇಟ್ನಲ್ಲಿ ಜಾಸ್ತಿ ಇದೆ ಎಂದು ಹೇಳಿದರು. ಇದನ್ನೆಲ್ಲಾ ಸರ್ಕಾರ ರೂಪಿಸಬೇಕು. ಪ್ರೈವೇಟ್ನವರು ಅವರಿಗೆ ಖುಷಿ ಬಂದ ಹಾಗೆ ಮಾಡುತ್ತಾ ಇರುವುದು, ಸರ್ಕಾರ ಅವರ ಖುಷಿಗೆ ಬಂದ ಹಾಗೆ ಮಾಡುತ್ತಾ ಇರುವುದಾದರೆ ದೇಶದ ನೀತಿ ಹೇಗೆ ನಡೆದೀತು.

ಅಧ್ಯಕ್ಷರು : ಮಾನ್ಯ ಇದಿನಬ್ಬನವರೆ, ತಾವು ಪ್ರಶ್ನೆ ಕೇಳಿದ್ದು ರಾಜ್ಯದಲ್ಲಿ ಈಗ ಹಾಲಿ ಜಾರಿಯಲ್ಲಿರುವ ಶಿಕ್ಷಣ ಪದ್ಧತಿಯನ್ನು ಬದಲಿಸಿ, ಹೊಸ ರೀತಿಯ ಬದಲಾವಣೆಯ ರೂಪ ಕೊಡುವ ಯೋಜನೆ ಸರ್ಕಾರಕ್ಕೆ ಇದೆಯೇ ಎಂದು. ಸಚಿವರು ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಹೊಸ ರೂಪದ ಶಿಕ್ಷಣದ ಪದ್ಧತಿಯ ರೂಪರೇಷೆ ವ್ಯವಸ್ಥೆಗಳೇನು ಎಂದು ಕೇಳಿದ್ದಕ್ಕೆ ಅವರು ಉದ್ಭವಿಸುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ.

ಶ್ರೀ ಬಿ.ಎಂ. ಇದಿನಬ್ಬ : ಹಿಂದೆ ಸದನದಲ್ಲಿ ಹೊಸದನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ. ಹಾಗೆ ಮಾಡುತ್ತಾರೆಯೇ ಎಂದು ಕೇಳಿದೆ.

ಅಧ್ಯಕ್ಷರು : ನೀವು ಹೇಳಿದ ಎಲ್ಲಾ ಸಲಹೆಗಳನ್ನು ಅಳವಡಿಸಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

**ಇತರೇ ರಾಜ್ಯಗಳಲ್ಲಿರುವ ಕನ್ನಡ ಶಾಲೆಗಳ ಸಂಖ್ಯೆ ಕುರಿತು**

112 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜೀರದ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಹೊರ ರಾಜ್ಯಗಳಲ್ಲಿರುವ ಕನ್ನಡ ಶಾಲೆಗಳ ಸಂಖ್ಯೆ ಎಷ್ಟು? (ಈ ಬಗ್ಗೆ ಪೂರ್ಣ ವಿವರಗಳನ್ನು ನೀಡುವುದು) ?*

*ಆ) ಆ ಶಾಲೆಗಳ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು?*

*ಇ) ಈ ಶಾಲೆಗಳ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರವು ಅನುದಾನವನ್ನೇನಾದರೂ ಬಿಡುಗಡೆ ಮಾಡಿದೆಯೇ?*

*ಈ) ಬಿಡುಗಡೆ ಮಾಡಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಎಷ್ಟೆಷ್ಟು ಅನುದಾನವನ್ನು ಬಿಡುಗಡೆ ಮಾಡಿದೆ. (ರಾಜ್ಯವಾರು ಅಂಕಿ-ಅಂಶಗಳನ್ನು ನೀಡುವುದು) ?*

*ಉ) ಆ ಶಾಲೆಗಳ ಸ್ಥಿತಿಗತಿಗಳ ಬಗ್ಗೆ ತನಿಖೆ ನಡೆಸಲು ಶಿಕ್ಷಣ ಇಲಾಖೆಯ ಅಧಿಕಾರಿಗಳು ಎಷ್ಟೆಷ್ಟು ಭಾರಿ ಆ ಶಾಲೆಗಳಿಗೆ ಭೇಟಿ ನೀಡಿದ್ದಾರೆ?*

*ಊ) ಹೊರ ರಾಜ್ಯಗಳಲ್ಲಿ ವಾಸ ಮಾಡುತ್ತಿರುವ ಕನ್ನಡಿಗರ ಮಕ್ಕಳ ಅನುಕೂಲಕ್ಕಾಗಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳಾವುವು?*

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೊರ ರಾಜ್ಯಗಳಲ್ಲಿರುವ ಕನ್ನಡ ಶಾಲೆಗಳು ಈ ರಾಜ್ಯ ಸರ್ಕಾರದ ಆಡಳಿತ ವ್ಯಾಪ್ತಿಗೆ ಬರದೇ ಇರುವುದರಿಂದ ಇವುಗಳ ಬಗ್ಗೆ ಸರ್ಕಾರದಲ್ಲಿ ಮಾಹಿತಿ ಲಭ್ಯವಿಲ್ಲ. ಆದಾಗ್ಯೂ ಕೆಲವು ಸಂಘ ಸಂಸ್ಥೆಗಳು ಹೊರ ರಾಜ್ಯಗಳಲ್ಲಿ ಶಾಲಾ ಕಾಲೇಜುಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಮತ್ತು ಇ) ಹೊರನಾಡ ಕನ್ನಡ ಶಾಲೆಗಳ ಅಭಿವೃದ್ಧಿಗಾಗಿ ಶಿಕ್ಷಣ ಇಲಾಖೆಯು ಯಾವುದೇ ನಿರ್ದಿಷ್ಟ ಕಾರ್ಯಕ್ರಮ ರೂಪಿಸಿಲ್ಲ.

ಈ) ಉದ್ಭವಿಸುವುದಿಲ್ಲ

ಉ) ನಿಯಾಮಾವಳಿಗಳ ಪ್ರಕಾರ ಭೇಟಿ ನೀಡಲು ಅವಕಾಶವಿರುವುದಿಲ್ಲ

ಊ) ಈ ಬಗ್ಗೆ ಸರ್ಕಾರವು ಯಾವ ನಿರ್ದಿಷ್ಟ ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸನ್ಮಾನ್ಯ ಅಧ್ಯಕ್ಷರೇ, ಹೊರ ರಾಜ್ಯಗಳಲ್ಲಿರುವ ಕನ್ನಡ ಶಾಲೆಗಳ ಸಂಖ್ಯೆ ಎಷ್ಟು ಎಂದು ಪ್ರಶ್ನೆ ಕೇಳಿದ್ದಕ್ಕೆ ಉತ್ತರವಾಗಿ ಸರ್ಕಾರದಲ್ಲಿ ಅದರ ಬಗ್ಗೆ ಮಾಹಿತಿ ಇಲ್ಲವೆಂದು ಹೇಳಿದ್ದಾರೆ. ಅನಂತರ, ಹೊರ ರಾಜ್ಯಗಳಲ್ಲಿ ಶಾಲಾ-ಕಾಲೇಜುಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಆ ಶಾಲೆಗಳ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು ಎಂದು ಕೇಳಿದ್ದಕ್ಕೆ ಹೊರನಾಡ ಕನ್ನಡ ಶಾಲೆಗಳ ಅಭಿವೃದ್ಧಿಗಾಗಿ ಶಿಕ್ಷಣ ಇಲಾಖೆಯು ಯಾವುದೇ ನಿರ್ದಿಷ್ಟ ಕಾರ್ಯಕ್ರಮಗಳನ್ನು ರೂಪಿಸಿಲ್ಲವೆಂದು ಉತ್ತರಿಸಿದ್ದಾರೆ. ಇವರಿಗೆ ಕನ್ನಡದ ಬಗ್ಗೆ ಎಷ್ಟು ಅಭಿಮಾನ, ಪ್ರೀತಿ ಇದೆಯೆಂಬುದು ಇಲ್ಲಿ ಗೊತ್ತಾಗುತ್ತದೆ. ನನಗೆ ಗೊತ್ತಿರುವ ಪ್ರಕಾರ ಹೊರ ರಾಜ್ಯಗಳಲ್ಲಿ ಅಂದರೆ, ದೆಹಲಿಯಲ್ಲಿ ಕನ್ನಡ ಸಂಘ ಇದೆ, ಆ ಸಂಘಕ್ಕೆ ಬೇಕಾದಷ್ಟು ಹಣ ಕೊಟ್ಟಿದ್ದಾರೆ. ಮದರಾಸಿನಲ್ಲಿ ಐನಾವರ ಎಂದು ಒಂದು ಕನ್ನಡ ಸಂಘ ಇದೆ, ಅದಕ್ಕೂ ಹಣ ಕೊಟ್ಟಿದ್ದಾರೆ. ಅನಂತರ